**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ. 622/2019</u>**

**<u>ಸಿ.ಡಬ್ಲ್ಯೂಃ 5 ಪಿ.ಡಬ್ಲ್ಯೂಃ 5</u>**

| | | |
|---|---|---|
| ಸಾಕ್ಷಿದಾರನ ಹೆಸರು | : | ಪ್ರಸಾದ ಯಾದವ |
| ತಂದೆಯ ಹೆಸರು | : | ಜಿ ಪಾಂಡು |
| ವಯಸ್ಸು | : | 42 ವರ್ಷ |
| ಕೆಲಸ | : | ಡೆಲಿವರಿ ಬಾಯ್ |
| ವಾಸ | : | ಸಿರುಗುಪ್ಪ |

**<u>ಸಾಕ್ಷಿಗೆ ದಿನಾಂಕಃ 18.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

1. ನನಗೆ ಚಾಸಾ 1, 4, 6, 7 ಪರಿಚಯ. ಆರೋಪಿತರು ಗೊತ್ತು. ನಾನು 17-18 ವರ್ಷಗಳ ಕಾಲ ಕೃಷ್ಣಾ ಗ್ಯಾಸ್ ಏಜೆನ್ಸಿಯಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದೆನೆ. ದಿಃ 11.01.2016 ರಂದು 1 ನೇ ಆರೋಪಿ ನನಗೆ ರೂ. 40,000/- ಯ ಚೆಕ್ಕ್ ನಂ 235418 ನ್ನು ಕೊಟ್ಟು ಹಣವನ್ನು ನನ್ನ ಖಾತೆಗೆ ಹಾಕಿಕೊಂಡು ನಗದು ಬಿಡಿಸಿಕೊಂಡು ಬಾ ಎಂದು ಹೇಳಿದರು. ನಾನು 2-3 ದಿನ ಆದ ನಂತರ ಅವರು ಹೇಳಿದ ಹಾಗೇ ಹಣವನ್ನು ಬಿಡಿಸಿಕೊಟ್ಟೆನು. 1 ನೇ ಆರೋಪಿ ಇದೇ ರೀತಿ ಬೇರೆ ಕೆಲಸಗಾರರ ಮೂಲಕ ಹಣವನ್ನು ಬಿಡಿಸಿಕೊಂಡಿರುವುದು ಗೊತ್ತಾಯಿತು. ಇದಷ್ಟು ಹೊರತುಪಡಿಸಿ ಬೇರೆ ವಿಚಾರ ಗೊತ್ತಿಲ್ಲ. ಪೋಲಿಸರಿಗೆ ಈ ಬಗ್ಗೆ ಹೇಳಿಕೆ ಕೊಟ್ಟಿದ್ದೆನೆ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಕೋರಿರುತ್ತಾರೆ. ಪ್ರಕರಣದ ವಾಸ್ತವಾಂಶ, ಸಾಕ್ಷಿಯ ಹೇಳಿಕೆ ಮತ್ತು ದೋಷರೋಪಣೆಗಳನ್ನು ಗಮನಿಸಿ ಸಾಕ್ಷಿಯು ಅಭಿಯೋಜನ ಪ್ರಕರಣಕ್ಕೆ ಸಂಪೂರ್ಣವಾಗಿ**

**ಬೆಂಬಲಿಸದೆ ಇದ್ದ ಕಾರಣ ಮಾನ್ಯ ಎಪಿಪಿ ಯವರು ಕೋರಿಕೆಯನ್ನು ಪರಿಗಣಿಸಿ ಪಾಟಿ ಸವಾಲಿಗೆ ಅವಕಾಶ ನೀಡಲಾಯಿತು)**

**<u>ಪಾಟೀ ಸವಾಲು ಸ ಸ ಅ ರವರಿಂದ</u>**

2. 2015 ರಲ್ಲಿ 1 ನೇ ಆರೋಪಿ ಆರೋಗ್ಯ ಸರಿ ಇಲ್ಲದ ಕಾರಣ ಕೃಷ್ಣಾ ಗ್ಯಾಸ್ ಏಜೆನ್ಸಿಯ ಪಾಲುಗಾರಿಕೆಯಿಂದ ಹೊರಬಂದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಪಾಲುಗಾರಿಕೆಯಿಂದ ಹೊರಬಂದರು ಸಹ ಚೆಕ್ಕುಗಳ ಮೂಲಕ 1,65,000/- ಹಣವನ್ನು ಬಿಡಿಸಿಕೊಂಡು ಚಾಸಾ 1 ರವರಿಗೆ ನಂಬಿಕೆ ದ್ರೋಹ ಹಾಗೂ ಮೋಸ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬ್ಯಾಂಕರವರು ಚಾಸಾ 1 ರವರು ನೀಡಿದ ಪತ್ರವನ್ನು ಕಡೆಗಣಿಸಿ ಹಣವನ್ನು 1 ನೇ ಆರೋಪಿಗೆ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ, ಈ ಬಗ್ಗೆ ಚಾಸಾ 1 ರವರಾು ದೂರು ದಾಖಲು ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಈ ಬಗ್ಗೆ ನನಗೆ ಈ ಬಗ್ಗೆ ಈಗ ಓದಿ ಹೇಳಿದಂತೆ "ಅದೇ ರೀತಿ ನನಗೆ .................ತಿಳಿಯಿತು" ಎಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿಃ 22 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲಿಗೆ ಮುಂದುಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಸಿರುಗುಪ್ಪ.

**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ. 622/2019</u>**

**<u>ಸಿ.ಡಬ್ಲ್ಯೂ: 6 ಪಿ.ಡಬ್ಲ್ಯೂ: 4</u>**

ಸಾಕ್ಷಿದಾರನ ಹೆಸರು : ದೇವರಾಜಗೌಡ
ತಂದೆಯ ಹೆಸರು : ವೀರನಗೌಡ
ವಯಸ್ಸು : 32 ವರ್ಷ
ಕೆಲಸ : ಖಾಸಗಿ ಕೆಲಸ
ವಾಸ : ಸಿರುಗುಪ್ಪ

**<u>ಸಾಕ್ಷಿಗೆ ದಿನಾಂಕಃ 18.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

1. ನನಗೆ ಚಾಸಾ 1, 4, 5, 7 ಮತ್ತು 8 ಪರಿಚಯ. ಆರೋಪಿತರು ಗೊತ್ತು. ನಾನು 2015 ರಲ್ಲಿ ಅಡಿಟರ್ ನಾಗನಗೌಡ ಬಳಿ ಅಕೌಂಟೆಟ್ ಕೆಲಸ ಮಾಡುತ್ತಿದ್ದೆ. ದಿಃ 19.12.2015 ರಂದು 1 ನೇ ಆರೋಪಿ ರವರು ಬೆಃ 11.30 ಗಂಟೆಗೆ ನಮ್ಮ ಕಚೇರಿಗೆ ಬಂದು ಸಹಿ ಮಾಡಿದ ಚೆಕ್ ನಂ 235415, ರೂ 70,000/- ವುಳ್ಳ ಚೆಕ್ಕನ್ನು ನನಗೆ ಕೊಟ್ಟು ಅದರ ಹಿಂದೆ ಕೃಷ್ಣ ಗ್ಯಾಸ್ ಪಾರ್ಟನರ್ಸ ಎಂದು ಬರೆದು ಹಣವನ್ನು ವಿತ್ ಡ್ರಾ ಮಾಡಿಕೊಂಡು ಬರಲು ನನಗೆ ಹೇಳಿದರು. ನಾನು ನನ್ನ ಮೊಬೈಲ್ ನಂ 9880423864 ನ್ನು ಬ್ಯಾಂಕ್ ಸ್ಲೀಪ್ ನಲ್ಲಿ ಬರೆದು ರೂ. 70,000/- ಹಣವನ್ನು ಪಡೆದು ಆರೋಪಿ ನಂ 1 ರವರಿಗೆ ಕೊಟ್ಟೆನು. ಆರೋಪಿ ನಂ 1 ರವರು 2015 ರಲ್ಲಿ ಕೃಷ್ಣಾ ಗ್ಯಾಸ್ ನ ಪಾರ್ಟನರ್ ಶಿಪ್ ನಿಂದ ಹೊರ ಬಂದಿದ್ದರು ಎಂದು ನಂತರ ಗೊತ್ತಾಯಿತು. 1 ನೇ

ಆರೋಪಿಯು ಕೃಷ್ಣಾ ಗ್ಯಾಸ್ ಏಜೆನ್ಸಿಯ ರೂ. 1,65,000/- ನಾಲ್ಕು ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಚಾಸಾ 1 ರವರಿಗೆ ಮೋಸ ಮಾಡಿದ್ದಾರೆ ಎಂದು ಚಾಸಾ 4 ಮತ್ತು 7 ರವರ ಮೂಲಕ ಗೊತ್ತಾಯಿತು. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೆನೆ.

**ಆರೋಪಿ ಪರ ಪಾಟೀ ಸವಾಲಿಗೆ ಮುಂದುಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**